ಪ್ರಜಾವಾಣಿ

# ಬೊಕ್ಕಸಕ್ಕೆ ಹೊರೆಯಾಗಲಿರುವ ಬಜೆಟ್!

ಮುಂಬರುವ ಲೋಕಸಭಾ ಚುನಾವಣೆ ಗಮನದಲ್ಲಿ ಇಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಎರಡನೇ ಬಜೆಟ್‌ನಲ್ಲಿ ನಿಜಕ್ಕೂ ಆಶ್ಚರ್ಯ ಮೂಡಿಸುವಂಥದ್ದು ಏನೂ ಇಲ್ಲ!

ಚುನಾವಣೆ ಹೊಸ್ತಿಲಲ್ಲಿರುವಾಗ ಸಿದ್ದರಾಮಯ್ಯ ಅವರಿಗೆ ಇಂತಹ ಬಜೆಟ್ ಅನಿವಾರ್ಯವೂ ಆಗಿತ್ತು. ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ದಿನದಂದು ಆರಂಭವಾದ 'ಆಕರ್ಷಕ ಕೊಡುಗೆ' 'ರಿಯಾಯ್ತಿ' ಘೋಷಣೆಯ ಪರಿಪಾಠದ ಮುಂದುವರೆದ ಭಾಗವೇ ಇಂದಿನ ರಾಜ್ಯ ಬಜೆಟ್. ಇದರ ಹೊರತಾಗಿ ಅವರ ಮುಂದೆ ಬೇರೆ ಮಾರ್ಗ ಮತ್ತು ಆಯ್ಕೆಗಳೇ ಇರಲಿಲ್ಲ.

ಬಜೆಟ್‌ನಲ್ಲಿ ಮುಖ್ಯಮಂತ್ರಿ ಘೋಷಿಸಿದ ಸಬ್ಸಿಡಿ ಮತ್ತು ರಿಯಾಯ್ತಿ ಗಳಂತಹ ಕೊಡುಗೆಗಳ ಮಹಾಪೂರ ಸರ್ಕಾರದ ಬೊಕ್ಕಸಕ್ಕೆ ಹೆಚ್ಚಿನ ಹೊರೆಯಾಗುವುದರಲ್ಲಿ ಸಂಶಯವಿಲ್ಲ. ಬಜೆಟ್‌ನಲ್ಲಿ ಘೋಷಿಸಿರುವ ಭಾರಿ ಕೊಡುಗೆಗಳು 'ಎಲ್ಲರನ್ನು ಸಂತುಷ್ಟ'ಗೊಳಿಸುವ ಮತ್ತು 'ಸಿಕ್ಕಷ್ಟು ಬಾಚಿಕೊಳ್ಳಿ' ಎಂಬ ಧೋರಣೆಯ ಮುಂದುವರಿದ ಭಾಗಗಳಾಗಿವೆ. ಸಾಧ್ಯವಾದಷ್ಟು ಹೆಚ್ಚಿನ ಕೊಡುಗೆ ಘೋಷಿಸುವ ಮೂಲಕ ಕೊಡುಗೈ ದೊರೆ ಎನಿಸಿಕೊಂಡ ಮುಖ್ಯಮಂತ್ರಿಗಳು, ರಿಯಾಯ್ತಿ ಮತ್ತು ಕೊಡುಗೆ ನೀಡುವಲ್ಲಿ ತೋರಿಸಿದ ಆಸಕ್ತಿಯನ್ನು 'ಸುಸ್ಥಿರ ಬೆಳವಣಿಗೆ ಪ್ರಮಾಣ' ಕಾಯ್ದುಕೊಳ್ಳುವತ್ತ ತೋರಿಸಿಲ್ಲ. ಸಿದ್ದರಾಮಯ್ಯ ಈ ದಿಸೆಯಲ್ಲಿ ಕಠಿಣ ನಿರ್ಧಾರ ತಳೆಯಬೇಕಾಗಿತ್ತು.

ಕಾಂಗ್ರೆಸ್ ನೇತೃತ್ವದ ಯುಪಿಎ ಮೈತ್ರಿಕೂಟಕ್ಕೆ ಅತ್ಯಂತ ಪ್ರಮುಖವಾಗಿರುವ ಲೋಕಸಭಾ ಚುನಾವಣೆಯಲ್ಲಿ



ಸಂದೀಪ್ ಶಾಸ್ತ್ರಿ

## ಬಜೆಟ್ ವಿಶ್ಲೇಷಣೆ

ಹೆಚ್ಚಿನ ಸ್ಥಾನಗಳನ್ನು ಗೆಲ್ಲಿಸಿಕೊಡುವ ಒತ್ತಡ ಮುಖ್ಯಮಂತ್ರಿ ಮತ್ತು ಪಕ್ಷದ ಮೇಲಿರುವುದು ಸ್ಪಷ್ಟ. ಇದರಿಂದಾಗಿ ಸಹಜವಾಗಿ ಮುಖ್ಯಮಂತ್ರಿ ಮಂಡಿಸಿದ ಈ ಬಜೆಟ್, ಜನಪ್ರಿಯತೆಯ ಮತ್ತು ಚುನಾವಣಾ ತಂತ್ರದ ಭಾಗವಾಗಿರುವುದು ಎದ್ದು ಕಾಣುತ್ತದೆ. ನಿರೀಕ್ಷಿತ ವರಮಾನಕ್ಕಿಂತ ನೈಜ ವರಮಾನದಲ್ಲಿ ಕಂಡುಬರುವ ಅಂದಾಜು ಶೇ 30ರಷ್ಟು ಕೊರತೆ ನಿಜವಾದ ಆತಂಕಕ್ಕೆ ಕಾರಣವಾಗಿದೆ. ಇದು ನಾನಾ ಸಮಸ್ಯೆಗಳನ್ನು ತಂದೊಡ್ಡಲಿದೆ. ವರಮಾನ ಕೊರತೆಯ ನೇರ ಪರಿಣಾಮ ಹಣದುಬ್ಬರ ದರವನ್ನು ಮತ್ತಷ್ಟು ಹೆಚ್ಚಿಸುತ್ತದೆ. ಇದರಿಂದಾಗಿ ಸರ್ಕಾರ ಆರ್ಥಿಕ ಸಮಸ್ಯೆ ಎದುರಿಸಬೇಕಾಗುತ್ತದೆ. ಇದು ದುರ್ಬಲ ಆರ್ಥಿಕ ನಿರ್ವಹಣೆಗೂ ಕಾರಣವಾಗುತ್ತದೆ.

ಪ್ರಸ್ತುತ ಹಣಕಾಸು ವರ್ಷದಲ್ಲಿ ವರಮಾನ ಸಂಗ್ರಹ ನಿರೀಕ್ಷೆಗಿಂತ ತುಂಬಾ ಕಡಿಮೆ ಪ್ರಮಾಣದಲ್ಲಿದೆ. ಈ ಸಮಸ್ಯೆಗೆ ಪರಿಹಾರ ಸೂಚಿಸುವ ಉಪಾಯಗಳನ್ನು ಕಂಡುಕೊಳ್ಳುವ ಪ್ರಯತ್ನಗಳು ನಡೆಯದಿರುವುದೂ ಗೋಚರಿಸುತ್ತದೆ. ಪ್ರಸ್ತುತ ಬಜೆಟ್‌ನಲ್ಲಿ ಕೇವಲ ಊಹೆಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ವೆಚ್ಚಗಳ ಮೇಲೆ ಮಿತಿ ಹೇರುವ ಮತ್ತು ನಿರೀಕ್ಷಿತ ವರಮಾನ ಸಂಗ್ರಹಕ್ಕೆ ಇರುವ ಮಾರ್ಗಗಳತ್ತ ಚಿತ್ತ ಹರಿಸದಿರುವುದು ಸ್ಪಷ್ಟವಾಗಿದೆ. ಚುನಾವಣೆಯ ಮೇಲೆ ಪರಿಣಾಮ ಬೀರಬಲ್ಲ ಸಂಗತಿಗಳಿಗೆ ಮಾತ್ರ ಇಲ್ಲಿ ಆದ್ಯತೆ ನೀಡಲಾಗಿದೆ. ಸಮಾಜದ ಒಂದು ವರ್ಗಕ್ಕೆ ಮಾತ್ರ ರಿಯಾಯ್ತಿ ಮತ್ತು ಸಬ್ಸಿಡಿ ಘೋಷಿಸಲಾಗಿದ್ದು. ಮತ್ತೊಂದು ವರ್ಗಕ್ಕೆ ತೆರಿಗೆ ಭಾರವನ್ನು ಹೆಚ್ಚಿಸಲಾಗಿದೆ. ತೆರಿಗೆಗೆ ಸಂಬಂಧಿಸಿದಂತೆ ಸ್ಪಷ್ಟವಾದ ನೀತಿಯನ್ನೂ ಅನುಸರಿಸಲಾಗಿಲ್ಲ.

**ಇಲ್ಲದ ವೆಚ್ಚದ ಮಾಹಿತಿ:** ಯಾವ, ಯಾವ ಕ್ಷೇತ್ರಗಳಿಗೆ ಎಷ್ಟು ವೆಚ್ಚ ಮಾಡಲಾಗುತ್ತದೆ ಎಂಬ ಬಗ್ಗೆಯೂ ಸ್ಪಷ್ಟವಾದ ಮಾಹಿತಿ ಬಜೆಟ್‌ನಲ್ಲಿ ಇಲ್ಲ. ಚುನಾವಣೆ ಹೊಸ್ತಿಲಿನಲ್ಲಿ ಇದಕ್ಕಿಂತ ಹೆಚ್ಚಿನದನ್ನು ನಿರೀಕ್ಷಿಸಲು ಸಾಧ್ಯವಿಲ್ಲ ಎಂದು ಸರ್ಕಾರದ ಬೆಂಬಲಿಗರು ವಾದಿಸಬಹುದು.

ಬಜೆಟ್‌ನಲ್ಲಿ ತೋರಿಸಿರುವ ವರಮಾನ ಮತ್ತು ವೆಚ್ಚಕ್ಕೂ ಹೊಂದಾಣಿಕೆಯಾಗಬಹುದು. ಆದರೆ, ಈ ಹಿಂದಿನ ಅನುಭವದ ಪ್ರಕಾರ, ಹಣದುಬ್ಬರವು ವರಮಾನದ ಮೇಲೆ ಪ್ರತಿಕೂಲ ಪರಿಣಾಮ ಬೀರುವ ಸಾಧ್ಯತೆ ಇದೆ. ಹಣದುಬ್ಬರದ ನೇರ ಪರಿಣಾಮದಿಂದಾಗಿ ವರಮಾನದ ಪ್ರಮಾಣದಲ್ಲಿ ಕುಸಿತ ಕಂಡುಬರುತ್ತದೆ. ಮುಂಬರುವ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಸಿದ್ಧಪಡಿಸಿದ ಬಜೆಟ್, ರಾಜ್ಯದ ಮುಂದಿನ ಆರ್ಥಿಕ ಸ್ಥಿರತೆಯ ಮೇಲೂ ದುಷ್ಪರಿಣಾಮ ಬೀರುವ ಸಾಧ್ಯತೆಗಳು ಇವೆ.

– ಲೇಖಕರು

ಸಹ ಕುಲಪತಿ, ಜೈನ್ ವಿಶ್ವವಿದ್ಯಾಲಯ